ವಿದ್ಯಾರ್ಥಿಗಳು ತಮ್ಮ ಮುಂದಿನ ಮಾರ್ಗದರ್ಶಕರನ್ನು ಹುಡುಕಲಾರಂಭಿಸಿದರು. ಸಂಶೋಧನಾ ಸಹಾಯಕರು ಅಲ್ಲಿಲ್ಲಿ ತೂರಿಕೊಂಡರು. ನಯನಾ ಟರ್ನರ್ ನನ್ನು ನಂಬಿ ಅವನಿಗೆ ಫೋನ್ ಮಾಡಿದಳು. ಅವನು ಕರೆಯನ್ನು ತೆಗೆದುಕೊಳ್ಳಲಿಲ್ಲ. ಕೆಲವು ದಿನಗಳ ನಂತರ ಅವನ ನಂಬರ್ ಚಾಲನೆಯಲ್ಲಿಲ್ಲ ಎಂಬ ಸಂದೇಶ ಬರಲಾರಂಭಿಸಿತು. ಅವನಿಗೆ ಈಮೇಲ್ ಮಾಡಿದಳು. ಉತ್ತರವಿಲ್ಲ. ನಂತರ ಅವನ ವೈಯಕ್ತಿಕ ಜಿಮೇಲಿಗೆ ಮೇಲ್ ಕಳಿಸಿದಳು. ಯಾವುದೋ ಮಧ್ಯವರ್ತಿ ಸಂಸ್ಥೆಯಿಂದ ಕ್ಷಣದಲ್ಲಿ ಉತ್ತರ ಬಂದಿತ್ತು - ನಿಮ್ಮ ಈಮೇಲನ್ನು ಪ್ರೊಫೆಸರ್ ಟರ್ನರ್ ಅವರಿಗೆ ಫೋರ್ವರ್ಡ್ ಮಾಡಲಾಗಿದೆ. ಅವರಿಗೆ ಆಸಕ್ತಿ ಇದ್ದಲ್ಲಿ ಅವರೇ ನಿಮಗೆ ಉತ್ತರ ನೀಡುತ್ತಾರೆ. ನಾಲ್ಕಾರು ಬಾರಿ ಇದರ ಪುನರಾವರ್ತನೆ ಆಯಿತು. ಸ್ಟೆಲ್ಲಾ ಇಡಿಯಾಗಿ ಅವಳ ಕೈಬಿಡಲಿಲ್ಲ. ಯಾರೊಡನೆಯೋ ಹೇಳಿಕಳಿಸಿದಳು. “ಅವಳು ನನ್ನನ್ನು ನೋಡಲಿ. ಆದಷ್ಟು ಸಹಾಯ ಮಾಡುತ್ತೇನೆ.” ಆದರೆ ನಯನಾಳಿಗೆ ಬಿಗುಮಾನ, ರೋಷ. “ಅವಳ ಹಂಗು ನನಗೇಕೆ?”

ಪ್ರಯೋಗಾಲಯದಲ್ಲಿ ತನ್ನ ಕೆಲಸ ಮುಂದುವರೆಸುವುದು ಸುಲಭವಾಗಿರಲಿಲ್ಲ. ಎಲ್ಲರೂ ಇವಳತ್ತ ದಿಟ್ಟಿಸಿ ನೋಡುವುದನ್ನು ಸಹಿಸುವುದು ನಯನಾಳಿಗೆ ಕಷ್ಟ ಎನಿಸಿತು. ಕೇವಲ ಎರಡು ದಿನಗಳಲ್ಲಿ ಕೆಲಸಕ್ಕೆ ರಾಜೀನಾಮೆ ನೀಡಿ ತಾಯಿಯ ಮನೆಗೆ ತನ್ನ ಗಂಟು ಮೂಟೆ ಸಮೇತ ಹಿಂದಿರುಗಿದಳು.

ತಂದೆ ತಾಯಿ ನಗುಮುಖದಿಂದಲೇ ಅವಳನ್ನು ಸ್ವಾಗತಿಸಿದರು. “ತುಂಬಾ ಬಡವಾಗಿಬಿಟ್ಟೆ” ಎಂದು ತಾಯಿ ಊಟ ಬಡಿಸಿದರು. ಅವಳ ರೂಮಿಗೆ ಅವಳ ಸೂಟ್ ಕೇಸ್ ಗಳನ್ನು ಸಾಗಿಸಿದರು. ಉಂಡು ಮಲಗಿದಾಗ ಅವಳಿಗೆ ಏನೋ ನೆಮ್ಮದಿ. ಕಳೆದ ವರ್ಷ ಹುಡುಕಿದರೂ ಸಿಗದಿದ್ದ ನೆಮ್ಮದಿ. ಅಲ್ಲಿ ಟರ್ನರ್, ಸ್ಟೆಲ್ಲಾ, ಉಳಿದ ಸಹೋದ್ಯೋಗಿಗಳು, ವರದಿಗಾರ್ತಿ ಯಾರೂ ಇರಲಿಲ್ಲ. ಮಲಗಿದವಳು ಮರುದಿನ ಮಧ್ಯಾಹ್ನದವರೆಗೂ ಏಳಲಿಲ್ಲ.

ಒಂದು ವಾರದ ನಂತರ ತಾಯಿ ಮತ್ತೆ ಪ್ರಸ್ತಾಪ ಮಾಡಿದರು.

“ಕಷ್ಟ ಬರುತ್ತೆ ಹೋಗುತ್ತೆ. ನಿನ್ನ ಗಾಯ ಕೂಡ ಇನ್ನೊಂದು ಸ್ವಲ್ಪ ದಿನದಲ್ಲಿ ಮಾಗುತ್ತೆ. ಎಲ್ಲಾ ಸರಿಹೊಂದುತ್ತೆ. ಆದರೆ ಇಂತಹ ಸಂದರ್ಭದಲ್ಲಿ ಜೊತೆಗೆ ಒಬ್ಬರು ಇರಬೇಕು. ಕಷ್ಟ ಸುಖ ಹಂಚಿಕೊಳ್ಳೋದಕ್ಕೆ. ನಾವಿಬ್ಬರೂ ಇರೋವರೆಗೂ ನಿನಗೆ ಪರವಾಗಿಲ್ಲ. ಆಮೇಲೆ ನಿನಗ್ಯಾರು ಇರ್ತಾರೆ. ಅದಕ್ಕೇ ಮದುವೆ ಮಾಡ್ಕೋಬೇಕು ಅನ್ನೋದು.’’

“ಆ ವಿಷಯ ನನಗೆ ಬಿಡಿ’’ ಎಂದವಳೇ ಆಸ್ಟ್ರೇಲಿಯಾ ಮತ್ತು ಉಳಿದ ದೇಶಗಳ ವಿಶ್ವವಿದ್ಯಾಲಯಗಳಿಗೆ ಅರ್ಜಿ ಸಲ್ಲಿಸಿದಳು. ಅವಳು ಸಂಶೋಧನೆಯ ಮೂಲಕ ಎಲ್ಲೆಡೆ ಹೆಸರು ಮಾಡಿದ್ದಳು. ಈಗ ಅವಳ ಬಗ್ಗೆ ಸಹಾನುಭೂತಿ ಬೇರೆ. ನಾಲ್ಕಾರು ಕಡೆ ಸಂಶೋಧನಾ ಸಹಾಯಕಿಯ ಹುದ್ದೆಗಳು ಸಿಕ್ಕಿದವು. ಅಡಿಲೈಡ್‌ನ ಸಂಬಳ ಆಕರ್ಷಣೀಯವಾಗಿದ್ದು ನಯನಾ ಅದನ್ನು ಆರಿಸಿಕೊಂಡು ಅತ್ತ ಸರಿದಳು.

ಈ ಮಧ್ಯೆ ಟರ್ನರ್ ಮೇಲೆ ಮತ್ತಷ್ಟು ಆರೋಪಗಳು ಬಹಿರಂಗವಾದವು. ಸಿಬ್ಬಂದಿಗಳ ಒತ್ತಡವನ್ನು ತಡೆಯಲಾಗದೆ ವಿಶ್ವವಿದ್ಯಾಲಯ ಅವನ ಮೇಲೆ ಮೊಕದ್ದಮೆ ಹೂಡಿತು. ವಿಚಾರಣೆ ಬಹಿರಂಗವಾಗಿ ನಡೆಯುವುದು ಖಚಿತ ಎನಿಸಿತು.

ಸಾಲದ್ದಕ್ಕೆ ಟರ್ನರ್ ಈಗ ಅಮೆರಿಕಕ್ಕೆ ಹೋಗಿ ನೆಲೆಸಿದ್ದಾನೆ. ಯಾವುದೋ ವಿಶ್ವವಿದ್ಯಾಲಯದಲ್ಲಿಯೋ ಅಥವಾ ಸಂಸ್ಥೆಯಲ್ಲಿಯೋ ನೇಮಕಗೊಂಡಿದ್ದಾನೆ ಎಂಬ ವದಂತಿ ಎಲ್ಲೆಡೆ ಹರಡಿತು.

ಟರ್ನರಿಗೆ ಅವಳು ಕಳುಹಿಸಿದ ಇಪ್ಪತ್ತೈದು ಈಮೇಲುಗಳಿಗೂ ಉತ್ತರ ಬರಲಿಲ್ಲ. ಅವನೀಗ ದೂರಸರಿದಿದ್ದ. ನಯನಾ ಈಗ ಹಿಂದಾದುದನ್ನೆಲ್ಲಾ ಅವಲೋಕಿಸಿದಳು. ಅವಳಿಗೆ ಮತ್ತೆ ಮತ್ತೆ ಹೊಳೆದದ್ದು, “ಈ ಟರ್ನರ್ ತನ್ನ ಸುಖಕ್ಕೆ ನನ್ನನ್ನು ಉಪಯೋಗಿಸಿಕೊಂಡು, ನನಗೆ ಅನೇಕ ಆಮಿಷಗಳನ್ನು ಒಡ್ಡಿದ್ದಾನೆ. ಅಲ್ಲದೆ ಮತ್ತೇನು?”

ಸೇಡು ತೀರಿಸಿಕೊಳ್ಳದೆ ವಿಧಿ ಇಲ್ಲ ಎನಿಸಿತು. ಬಹಿರಂಗವಾಗಿ ಅವನು ಮಾಡಿದ್ದನ್ನೆಲ್ಲಾ ಹೇಳಬೇಕು. ಎಲ್ಲರಿಗೂ ಗೊತ್ತಾಗಲಿ. ಕೂಡಲೇ ಸ್ಟೆಲ್ಲಾಳಿಗೆ ಈಮೇಲ್ ಕಳಿಸಿದಳು, “ಟರ್ನರ್‌ನ ವಿಚಾರಣೆ ಎಲ್ಲಿ ಮುಂದುವರೆದರೂ ಸರಿಯೇ. ನಾನು ಅವನ ವಿರುದ್ಧ ಸಾಕ್ಷಿ ನೀಡಲು ಸಿದ್ಧಳಿದ್ದೇನೆ.”

●